ಇಂಗ್ಲಿಷ್ ಎಷ್ಟು ಬೇಕು ಎಂಬ ಮಾತು ಅದರ ಆಯಸ್ಸೂ ಕ್ಷೀಣಿಸುತ್ತಾ ಹೋಗುತ್ತದೆ. ಪ್ರತಿಷ್ಠೆಯಾಗದಿರಲಿ: ಗ್ರಾಮೀಣ ರೈತರ ದಿನನಿತ್ಯದ

## ನಾರಾಯಣ ನೇತ್ರಾಲಯದಲ್ಲಿ ಯಶಸ್ವಿ ಶಸ್ತ್ರಚಿಕಿತ್ಸೆ

# ಪಾಕ್ ಬಾಲಕನ ದೃಷ್ಟಿದೋಷ ನಿವಾರಣೆ

ಬೆಂಗಳೂರು, ಜು. 5- ನೆರೆಯ ರಾಷ್ಟ್ರಗಳಾದ ಭಾರತ ಮತ್ತು ಪಾಕಿಸ್ತಾನ ನಡುವಿನ ವಕ್ರದೃಷ್ಟಿ ನಿವಾರಣೆಗಾಗಿ ರಾಜತಾಂತ್ರಿಕ ಮಟ್ಟದಲ್ಲಿ ಸಮಾಲೋಚನೆ ನಡೆಯುತ್ತಿರುವಂತೆಯೇ ನಗರದ ನಾರಾಯಣ ನೇತ್ರಾಲಯದಲ್ಲಿ ಪಾಕಿಸ್ತಾನಿ ಬಾಲಕನೊಬ್ಬನ ದೃಷ್ಟಿದೋಷ ನಿವಾರಿಸಲು ಯಶಸ್ವಿ ಶಸ್ತ್ರಚಿಕಿತ್ಸೆ ನಡೆದಿದೆ.

ನೇತ್ರಾಲಯದ ಮಕ್ಕಳ ಕಣ್ಣಿನ ಹಾಗೂ ಮೆಳ್ಳುಗಣ್ಣು ತಜ್ಞ ಡಾ. ಅರುಣ್ ಸಾಂಪ್ರತಿ ನಿನ್ನೆ 8 ವರ್ಷದ ಬಾಲಕ ಮಹದ್ ಮೆಹಮೂದ್‌ನ ಮೆಳ್ಳುಗಣ್ಣಿನ ಯಶಸ್ವಿ ಶಸ್ತ್ರಕ್ರಿಯೆ ನಡೆಸಿದರು.

ಇಂದು ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಡಾ. ಸಾಂಪ್ರತಿ ಹಾಗೂ ವೈದ್ಯಕೀಯ ನಿರ್ದೇಶಕ ಡಾ. ಕೆ. ಭುಜಂಗಶೆಟ್ಟಿ ಶಸ್ತ್ರಚಿಕಿತ್ಸೆಯ ವಿವರ ಒದಗಿಸಿದರು.

ಮಾಸ್ಟರ್ ಮಹದ್‌ನ ಬಲಗಣ್ಣು ಮೆಳ್ಳುಗಣ್ಣಾಗಿತ್ತು. ಬಾಲ್ಯದಿಂದಲೇ ಈ ತೊಂದರೆಗೊಳಗಾಗಿದ್ದ ಈತ ಬೈನಾಕ್ಯುಲರ್ ಹಾಗೂ ಸ್ಟೀರಿಯೋ ದೃಷ್ಟಿ ಕಳೆದುಕೊಂಡಿದ್ದ. ಬಾಲಕನನ್ನು ಪರೀಕ್ಷಿಸಿ ಶಸ್ತ್ರಚಿಕಿತ್ಸೆಯ ಅಗತ್ಯವನ್ನು ಗುರುತಿಸಿ ನಿನ್ನೆ ಪ್ರಯೋಗ ನಡೆಸಲಾಯಿತು. ಅರ್ಧ ಗಂಟೆಯ ಕಾಲ ನಡೆದ ಶಸ್ತ್ರಕ್ರಿಯೆ ಮೂಲಕ ಬಾಲಕನ 2 ಸ್ನಾಯುಗಳ ಸ್ಥಾನ ಪಲ್ಲಟಗೊಳಿಸಲಾಯಿತು. ಈಗ ಆರೋಗ್ಯದಿಂದಿದ್ದಾನೆ. 2 ವಾರಗಳಲ್ಲಿ ಸಂಪೂರ್ಣ ಚೇತರಿಸಿಕೊಳ್ಳುತ್ತಾನೆ ಎಂದು ಡಾ. ಸಾಂಪ್ರತಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಮೆಹಮೂದ್, ಪಾಕಿಸ್ತಾನದಲ್ಲಿ ಸೂಕ್ತ ಮೆಳ್ಳುಗಣ್ಣು ತಜ್ಞರಿಲ್ಲ. ಹಾಗಾಗಿ ಭಾರತಕ್ಕೆ ಬಂದೆವು. ಗೆಳೆಯರ ಸಲಹೆಯಂತೆ ವಾರದ ಹಿಂದೆ ನಾರಾಯಣ ನೇತ್ರಾಲಯಕ್ಕೆ ತಪಾಸಣೆಗಾಗಿ ಮಹದ್‌ನನ್ನು ಕರೆತಂದಿದ್ದೆವು. ನಿನ್ನೆ ಶಸ್ತ್ರಚಿಕಿತ್ಸೆ ನಡೆಸಿದರು. ತಾವು ಇಲ್ಲಿನ ಚಿಕಿತ್ಸೆ, ಆರೈಕೆಯ ಬಗ್ಗೆ ಪೂರ್ಣ ತೃಪ್ತಿ ಹೊಂದಿದ್ದೇವೆ ಎಂದು ಖುಷಿಯಿಂದ ಹೇಳಿದರು.



ಶಸ್ತ್ರಚಿಕಿತ್ಸೆ ಬಳಿಕ ತಂದೆಯ ಮಡಿಲಲ್ಲಿ ಮಲಗಿರುವ ಪಾಕಿಸ್ತಾನಿ ಬಾಲಕ ಮಹದ್ ಮೆಹಮೂದ್ ಜೊತೆಯಲ್ಲಿ ನಾರಾಯಣ ನೇತ್ರಾಲಯದ ವೈದ್ಯ ಡಾ. ಅರುಣ್ ಸಾಂಪ್ರತಿ ಹಾಗೂ ತಾಯಿ ಇದ್ದಾರೆ.

ಮೆಳ್ಳುಗಣ್ಣು ಚಿಕ್ಕ ವಯಸ್ಸಿನಲ್ಲಿ ಕಾಣಿಸಿಕೊಳ್ಳುವ ತೊಂದರೆಯಾಗಿದೆ. ಬೈನಾಕ್ಯುಲರ್ ದೃಷ್ಟಿ. ದೃಷ್ಟಿಯ ಆಳದ ಮೇಲೆ ಇದರಿಂದ ಪರಿಣಾಮ ಬೀರುತ್ತದೆ.

ವಂಶ ಪಾರಂಪರ್ಯ ಹಾಗೂ ಕಣ್ಣಿನ ಸ್ನಾಯು ದೌರ್ಬಲ್ಯದಿಂದ ಮೆಳ್ಳುಗಣ್ಣು ಕಾಣಿಸಿಕೊಳುತ್ತದೆ. ಪ್ರಥಮ 8 ವರ್ಷದೊಳಗೆ ಚಿಕಿತ್ಸೆ ನಡೆಸಬೇಕು. ಇಲ್ಲದೇ ಹೋದರೆ ಶಾಶ್ವತ ಮೆಳ್ಳುಗಣ್ಣು ತೊಂದರೆ ಅನುಭವಿಸುವಂತಾಗುತ್ತದೆ ಎಂದು ನಾರಾಯಣ ನೇತ್ರಾಲಯದ ನಿರ್ದೇಶಕ ಭುಜಂಗಶೆಟ್ಟಿ ಹೇಳಿದರು.

ಇದೇ ವೇಳೆ ಮೆಹಮೂದ್, ಭಾರತಕ್ಕೆ ಆಗಮಿಸಲು ವೈದ್ಯಕೀಯ ವೀಸಾದ ಸಮಸ್ಯೆಯಿದೆ. ವೀಸಾ ಪಡೆಯುವ ಪ್ರಕ್ರಿಯೆ ಕ್ಲಿಷ್ಟಕರವಾಗಿದೆ. ಶಸ್ತ್ರಚಿಕಿತ್ಸೋತ್ತರ ತಪಾಸಣೆಗಾಗಿ ಇಲ್ಲಿಗೆ ಬರಲು ಕಷ್ಟವಾಗಬಹುದು ಎಂದು ತಮ್ಮ ಸಮಸ್ಯೆ ಮುಂದಿಟ್ಟರು.